ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ ನ್ಯಾಯಾಲಯ

**ಓ.ಎಸ್. ಸಂಖ್ಯೆ285/2018**

ದಿನಾಂಕ **06.11.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿ ತೆಲುಗು ಭಾಷೆ ಬಲ್ಲವರಾಗಿದ್ದು, ಕನ್ನಡ ಭಾಷೆ ಸರಿಯಾಗಿ ಬಾರದ ಕಾರಣ ಶ್ರೀ.ಎ.ಎನ್.ಆರ್ ವಕೀಲರನ್ನು ಭಾಷಾಂತರಕಾರರನ್ನಾಗಿ ನೇಮಿಸಿ, ಪ್ರಮಾಣ ವಚನ ಬೋಧಿಸಿ ಸಾಕ್ಷಿಯ ಸಾಕ್ಷವನ್ನು ಬರೆದುಕೊಳ್ಳಲಾಯಿತು.

ಪಿ.ಡಬ್ಲ್ಯೂ-2

ಮುಂದುವರೆದ ಪಾಟೀ ಸವಾಲುಃ **1** ರಿಂದ **5** ನೇ ಪ್ರತಿವಾದಿಗಳ ಪರ ಶ್ರೀ. ಆರ್.ವಿ ವಕೀಲರಿಂದಃ

3. ದಾವಾ ಸರ್ವೆ ನಂ.231/1 ಸಿ ಆಗಿದೆ. ಸದರಿ ಸರ್ವೆ ನಂಬರ್ ಯಾವ ಊರಿಗೆ ಸೇರಿದ್ದು ಎಂದು ಊರಿನ ಹಸೆರು ನನಗೆ ಈಗ ಮರೆತು ಹೋಗಿದೆ. ದಾವಾ ಆಸ್ತಿಗೂ ನಮ್ಮ ಊರಿಗೂ 20 ಕಿ.ಮೀ ಅಂತರ ಇದೆ. ದಾವಾ ಆಸ್ತಿಯನ್ನು ನಾನು ನೋಡಿಲ್ಲ ಎಂದರೆ ನೋಡಿದ್ದೇನೆ. ದಾವಾ ಆಸ್ತಿಗಳು ಈಗ ಹನುಮಂತಪ್ಪನ ಹೆಸರಿನಲ್ಲಿ ಇವೆ. ಸದರಿ ದಾಖಲೆಗಳನ್ನು ನಾನು ನೋಡಿದ್ದೇನೆ. ದಿ.16.06.1990 ರಲ್ಲಿ ಸಂಜೀವಮ್ಮ ರವರ ಹೆಸರಿಗೆ ವಾದಿ ಹನುಮಂತಪ್ಪ ಕ್ರಯ ಮಾಡಿಕೊಟ್ಟಿದ್ದಾರೆ ಕ್ರಯಕ್ಕೆ ಪಡೆದ ದಿನದಿಂದಲೂ ಸಂಜೀವಮ್ಮ ರವರೆ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದರೂ ಎಂದರೆ ಸುಳ್ಳು. ಸಂಜೀವಮ್ಮ ಕ್ರಯಕ್ಕೆ ಪಡೆದ ನಂತರ ಅವರ ಹೆಸರಿಗೆ ಎಂ.ಆರ್.ನಂ.52/1993-94 ರಂತೆ ಖಾತೆ ಪಹಣಿ ಆಗಿವೆ ಎಂದರೆ ಸುಳ್ಳು. ಸಂಜೀವಮ್ಮ ತೀರಿಕೊಂಡ ನಂತರ ಪ್ರತಿವಾದಿ 1 ರಿಂದ 5 ರವರಿಗೆ ಪವತಿ ಖಾತೆ ಎಂ.ಆರ್.ನಂ.ಟಿ-45/2022-23 ಆಗಿದೆ ಎಂದರೆ ಸುಳ್ಳು.

4. ಈವತ್ತಿನ ವರೆಗೂ 1 ರಿಂದ 5 ನೇ ಪ್ರತಿವಾದಿಗಳೇ ಸ್ವಾಧೀನದಲ್ಲಿ ಇದ್ದಾರೆ ಹಾಗೂ ಎಲ್ಲಾ ದಾಖಲೆಗಳು ಪ್ರತಿವಾದಿಗಳ ಹೆಸರಿನಲ್ಲಿ ಇದೆ ಎಂದರೆ ಸುಳ್ಳು. ದಾವೆ ಸಲ್ಲಿಸಿದ

ನಂತರದಿಂದ ಅವರ ಹೆಸರನ್ನು ದಾಖಲೆಗಳಲ್ಲಿ ಸೇರಿಸಿಕೊಂಡಿದ್ದಾರೆ. 1993-94 ರಲ್ಲಿ ಸಂಜೀವಮ್ಮ ನ ಹೆಸರಿಗೆ ದಾವಾ ಸ್ವತ್ತು ಬಂದಿದ್ದು, ಆಕೆ ತೀರಿಕೊಂಡ ನಂತರ ಅವರ ಮಕ್ಕಳಾದ ಪ್ರತಿವಾದಿ 1 ರಿಂದ 5 ರವರ ಹೆಸರಿಗೆ ಬಂದಿದೆ ಎಂದರೆ ಸುಳ್ಳು. ನನ್ನನ್ನು ನ್ಯಾಯಾಲಯಕ್ಕೆ ವಾದಿ ಸಾಕ್ಷಿ ನುಡಿಯಲು ಕರೆದುಕೊಂಡು ಬಂದಿದ್ದಾರೆ. ಹನುಮಂತಪ್ಪ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದರಿಂದ ನಾನು ಅವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಕುಟುಂಬದವರು ಮಾರಾಟ ಮಾಡಿದ ಜಾಗದಲ್ಲಿ 1991 ರಿಂದಲೂ ಪ್ರತಿವಾದಿ 1 ರಿಂದ 5 ರವರು ಸ್ವಾಧೀನದಲ್ಲಿ ಇದ್ದಾರೆ ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>
(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ . ಹೇ. ಕೇ.  ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ